## 19

# ಯೇಸು ನೀಡಲಿರುವ ಶಾಂತಿ

## (ಯೋಹಾನ 16)

*"ನೀವು ನನ್ನಲ್ಲಿದ್ದು ಮನಶ್ಶಾಂತಿಯನ್ನು ಹೊಂದಿದವರಾಗಿರಬೇಕೆಂದು ಇದನ್ನೆಲ್ಲಾ ನಿಮಗೆ ಹೇಳಿದ್ದೇನೆ ಲೋಕದಲ್ಲಿ ಸಂಕಟ ಉಂಟು; ಧೈರ್ಯವಾಗಿರಿ, ನಾನು ಲೋಕವನ್ನು ಜಯಸಿದ್ದೇನೆ ಎಂದು ಹೇಳಿದನು" (ವಚನ 33).*

ಆತನಲ್ಲಿರುವ ಶಾಂತಿಯನ್ನು ಅವರು ಆನಂದಿಸಬಹುದು ಎಂಬ ವಿಚಾರವನ್ನು ಯೇಸು ಮೇಲುಪ್ಪರಿಗೆಯಲ್ಲಿ ಅವರಿಗೆ ತಿಳಿಸಿ ತನ್ನ ಚರ್ಚೆಯನ್ನು ಅಂತ್ಯಗೊಳಿಸಿದನು ಇದು ನಮಗೆ ಆಶ್ಚರ್ಯ ಉಂಟುಮಾಡುವದಿಲ್ಲ. ದೇವದೂತರು ಸಾರಿದ "ಶುಭವರ್ತಮಾನ" "ಮಹಾಸಂತೋಷ" ಮನುಷ್ಯರಲ್ಲಿ ಸಮಾಧಾನ ಎಂಬ ವಿಚಾರದಿಂದ ಯೇಸುವಿನ ಲೋಕದ ಜೀವನ ಆರಂಭವಾಯಿತು (ಲೂಕ 2:10, 14). ಪರಲೋಕ ಸೈನ್ಯವು ಈ ಸಂಗತಿಗಳನ್ನು ಒಕ್ಕೊರಲಿನಿಂದ ಪ್ರಕಟಿಸಿದಂತೆ ಯೇಸು ಸಹ ತಾನು ಶಿಲುಬೆಯ ನೆರಳಿನಲ್ಲಿದ್ದರೂ ಸಂಕಟದಲ್ಲಿದ್ದರೂ, ತನ್ನ ಅಪೊಸ್ತಲರಿಗೆ ಸಮಾಧಾನದ ಮಾರ್ಗವನ್ನು ತೋರಿದನು.

ಆತನು ಅವರಿಗೆ ದೇವರೊಂದಿಗಿನ ಸಮಾಧಾನವನ್ನು ನೀಡಲಿಲ್ಲ. ಅವರು ಈಗಾಗಲೇ ಅದನ್ನು ಹೊಂದಿದ್ದರು. ಒಬ್ಬನು ದೇವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವಾಗ ಅದನ್ನು ಹೊಂದುತ್ತಾನೆ. ಆತನು ನೀಡುವ ರಕ್ಷಣೆಯನ್ನು ಸ್ವೀಕರಿಸಿದವರು, ಆತನ ಕೋಪದಿಂದ ಪಾರಾಗಿ, ಆತನ ಸಮಾಧಾನಕ್ಕೆ ಸೇರಿರುವರು. ಈ ಅಪೊಸ್ತಲರು "ಆತನಲ್ಲಿರುವವರಿಗೆ ಅಪ ರಾಧ ನಿರ್ಣಯವು ಇಲ್ಲವೇ ಇಲ್ಲ" ಎಂದು ಹೇಳುವವರಾಗಿದ್ದರು (ರೋಮಾಪುರ 8:1). ಅವರು ಸಂಕಟದಲ್ಲೂ ಹಿಂಸೆಯಲ್ಲೂ ಹಾಗೂ ಕಷ್ಟದಲ್ಲೂ ಇರುವಾಗ ಸಮಾಧಾನ ಹೊಂದಿದವರಾಗಿದ್ದರು. ಈ ವಿಚಾರಗಳನ್ನು ಕುರಿತು ಅಪೊಸ್ತಲರು ಪ್ರಾರ್ಥಿಸುವಾಗ ಅದನ್ನು ಹೊಂದುತ್ತಿದ್ದರು. ಕೃಪೆಯಿಂದ ರಕ್ಷಿಸಲ್ಪಟ್ಟವರು ಈ ಸಮಾಧಾನದಲ್ಲಿ ಮುಂದುವರೆಯುವರು. ಬಿರುಗಾಳಿಯ ಸುಳಿಯಲ್ಲಿ ಸಿಕ್ಕಿಕೊಂಡಿರುವವರು ಆತನ ಬಳಿಗೆ ಬಂದು, ಸಮಾಧಾನಕ್ಕಾಗಿ ಮೊರೆ ಇಡುವಾಗ, ದೇವರು ಈ ಪ್ರಾಯೋಗಿಕವಾದ ಸಮಾಧಾನವನ್ನು ಅವರಿಗೆ ನೀಡುವನು.

ಮೇಲುಪ್ಪರಿಗೆಯ ಚರ್ಚೆಯಲ್ಲಿ, ಯೇಸು ತನ್ನ ಅಪೊಸ್ತಲರಿಗೆ ಮುಂದೆ ಸಂಭವಿಸಬಹುದಾದ ದುಃಖದ ಕುರಿತು ಪದೇ ಪದೇ ನೆನಪು ಮಾಡಿದ್ದನು. ಈ ಲೋಕದ ಕೆಟ್ಟ ಜನರಿಂದ ಅವರಿಗೆ ದ್ವೇಷ, ಅಸೂಯೆ ಉಂಟಾಗುತ್ತದೆ ಎಂದು ತಿಳಿದರು (15:18-25), ಹಾಗೂ ನೀತಿಯ ನಿಮಿತ್ತ ಹಿಂಸೆ ಆಗುತ್ತದೆ ಎಂದು ಅರಿತರು (15:20). ಲೋಕವು ಅವರ ಮೇಲೆ ಹೊರಿಸುವಂತ ಸಂಕಟಗಳ ಕುರಿತು ತಿಳಿದು ಅವರು ಕಳವಳಗೊಂಡರು. ಈ ಸಂದರ್ಭದಲ್ಲಿ, "... ನನ್ನ ಸಮಾಧಾನವನ್ನು ನಿಮಗೆ ನೀಡುವನು" ಎಂಬ ಆತನ ಮಾತಿನಿಂದ ಅಪೊಸ್ತಲರಿಗೆ ಆನಂದವಾಯಿತಲ್ಲಾ!

ಅವರು ಸ್ಪಷ್ಟವಾದ ವ್ಯತ್ಯಾಸವನ್ನು ಅರಿತರು. ಲೋಕದಲ್ಲಿ ಅವರಿಗೆ ಸಂಕಟವಿದ್ದರೂ, ಯೇಸುವಿನಲ್ಲಿ ಸಮಾಧಾನ ಹೊಂದಿದ್ದರು. ಮೇಲುಪ್ಪರಿಗೆಯಲ್ಲಿ, "ನನ್ನ ಸಮಾಧಾನವನ್ನು ನಿಮಗೆ ನೀಡುವೆನು" ಎಂಬ ಸಂದೇಶವು ಆತನಿಂದ ದೊರೆಕಿದ ಕಡೇಯ ಸಂದೇಶವಾಗಿತ್ತು. ಆದರಿಂದ ಅವರಿಗೆ ಸಂತೈಸುವಿಕೆ ಉಂಟಾಯಿತು. ನಿಮ್ಮ ಸಮಸ್ಯೆಯನ್ನು ಹೊರತುಪಡಿಸಿ,

“ನನ್ನ ಸಮಾಧಾನದಲ್ಲಿ” ಭರವಸವಿಡಿರಿ ಎಂದು ಆತನು ಅವರಿಗೆ ಹೇಳುತ್ತಿದ್ದನು. ಇದು ಅವರಿಗೆ ಶುಭ ಸಮಾಚಾರವಾಗಿತ್ತು.

ಆತನು ಅವರಿಗೆ ನೀಡಿದ ಸಮಾಧಾನದ ಕುರಿತು ಹೆಚ್ಚಿನ ವಿವರಣೆಯನ್ನು ಆತನು ನೀಡದಿದ್ದರೂ, ಅದರಲ್ಲಿ ಅಡಕವಾಗಿದ್ದ ವಿಶೇಷವಾದ ಗುಣವನ್ನು ಅವರಿಗೆ ಮನವರಿಕೆ ಮಾಡಿದ್ದನು. ಯೇಸುವಿನ ಪ್ರಕಾರ ಸಮಾಧಾನ ಎಂಬುದರ ಅರ್ಥವೇನು?

## ಆತನ ಮಾತಿನ ಮುಖಾಂತರ ಉಂಟಾಗುವ ಸಮಾಧಾನ

*ಅದು ಆತನ ಮಾತಿನಲ್ಲಿ ಬೇರೂರಿರುವ ಸಮಾಧಾನ.* ಆತನ ಸತ್ಯದ ಮಾತುಗಳನ್ನು ನಾವುಗಳು ಒಪ್ಪಿಕೊಳ್ಳುವಾಗ, ಆ ಸಮಾಧಾನ ನಮಗೆ ದೊರಕುತ್ತದೆ. ಆತನು ಅವರಿಗೆ, “ನೀವು ನನ್ನಲ್ಲಿದ್ದು ಮನಶಾಂತಿಯನ್ನು ಹೊಂದುವಿರಿ” (16:33ಎ). ಅವರು ಸಮಾಧಾನ ಹೊಂದಿಕೊಳ್ಳುವಂತೆ, ಆತನು ಈ ಎಲ್ಲಾ ಮಾತುಗಳನ್ನು ಅವರಿಗೆ ತಿಳಿಸಿದ್ದನು. ಲೋಕವು ತನ್ನವರನ್ನು ಯಾವ ವಿಧದಲ್ಲಿ ನಡೆಸಿಕೊಂಡರು, ತನ್ನವರು ಸಮಾಧಾನದಿಂದಿರಬೇಕೆಂಬದೇ ಆತನ ಇಚ್ಛೆಯಾಗಿತ್ತು. ಈ ಹಿಂದೆ ಆತನು ಶಾಂತಿಯನ್ನು ನಿಮಗೆ ಬಿಟ್ಟು ಹೋಗುತ್ತೇನೆ, ನನ್ನಲ್ಲಿರುವಂಥ ಶಾಂತಿಯನ್ನು ನಿಮಗೆ ಕೊಡುತ್ತೇನೆ: “ಲೋಕವು ಕೊಡುವ ರೀತಿಯಿಂದ ನಾನು ನಿಮಗೆ ಕೊಡುವದಿಲ್ಲ” (14:27).

ಯೇಸುವಿನ ಶಾಂತಿಯು ನಿಖರವಾದ, ನಿಜವಾದ ಶಾಂತಿಯಾಗಿದೆ; ಅದರಲ್ಲಿ ಸುಳ್ಳು ಇರುವದಿಲ್ಲ, ಅದು ಊಹೆಯಾಗಿರುವದಿಲ್ಲ. ಆತನ ಬೋಧನೆಯನ್ನು ಕೇಳಿ ವಿಧೇಯನಾದವನು ಆತನ ಶಾಂತಿಯನ್ನು ಹೊಂದುವನು.

## ಆತನಲ್ಲಿ ಮಾತ್ರ ಸಮಾಧಾನ

*ಆ ಸಮಾಧಾನವು ಯೇಸುವಿನಲ್ಲಿ ಮಾತ್ರ ಪಡೆಯಬಹುದು.* ಆದ್ದರಿಂದ ಯೇಸು “ನನ್ನಲ್ಲಿ ನಿಮಗೆ ಸಮಾಧಾನವಿದೆ” ಅಂದನು. ಆತನಲ್ಲಿ ನೆಲೆಗೊಳ್ಳುವ ಪ್ರಮುಖ ಅಂಶ ಎಂದು ಆತನು ತಿಳಿಸಿದ್ದನು. “ನಾನು ದ್ರಾಕ್ಷೇಬಳ್ಳಿ, ನೀವು ಕೊಂಬೆಗಳು, ಒಬ್ಬನು ನನ್ನಲ್ಲಿಯೂ ನಾನು ಅವನಲ್ಲಿಯೂ ನೆಲೆಗೊಂಡದ್ದರೆ ಅವನೇ ಬಹಳ ಫಲ ಕೊಡುವನು; ನೀವು ನನ್ನನ್ನು ಬಿಟ್ಟು ಏನೂ ಮಾಡಲಾರಿರಿ” (15:5). ಆತನ ಹೊರತು ಅವರು ಫಲನೀಡುವದು ಅಸಾಧ್ಯ. ಹಾಗೂ ಸಮಾಧಾನ ಹೊಂದಲು ಅಸಾಧ್ಯವಾಗಿತ್ತು.

ಕಾರ್ಗತ್ತಲನ ಶಕ್ತಿಯನ್ನು ಜಯಿಸುವ ಸಲುವಾಗಿ ಆತನು ಶಿಲುಬೆಯನ್ನೇರಿದನು. ಲೋಕದಲ್ಲಿನ ಯಾವುದೇ ಶಕ್ತಿಗಳು, ಶಿಲುಬೆಯ ಮೇಲೆ ಸುರಿಸಿದ ರಕ್ತದಿಂದ ಉಂಟಾದ ಜಯವನ್ನು ತಡೆಯುವದು ಅಸಾಧ್ಯವಾಗಿತ್ತು. ಭವಿಷ್ಯದಲ್ಲಿರುವವರು ಸಹ ಶಿಲುಬೆಯ ಮೇಲೆ ಉಂಟಾದ ಜಯದಲ್ಲಿ ಪಾಲುದಾರರಾಗಿದ್ದಾರೆ. ಅಗತ್ಯವಿರುವವರಿಗೂ ಯೇಸು ತನ್ನ ಕೃಪೆಯನ್ನು ನೀಡುವನು, ಹಾಗೂ ಸಮಾಧಾನವನ್ನು ಸಹ ನೀಡುವನು. ಆತನ ಸನ್ನಿಧಿಯಲ್ಲಿ ನೆಲೆಗೊಂಡಿರುವವರು ಆತನ ಕ್ಷಮೆ, ಶಕ್ತಿ ಹಾಗೂ ವಾಗ್ದಾನದಲ್ಲಿ ಭರವಸವಿಟ್ಟವರು ಸಮಾಧಾನ ಹೊಂದುವರು.

## ಪ್ರತಿ ಸಂಕಟದಲ್ಲೂ ಸಮಾಧಾನ

*ಪ್ರತಿ ಸಂಕಟದ ನಡುವೆಯೂ ಆ ಸಮಾಧಾನವು ಇರುತ್ತದೆ.* ಆದ್ದರಿಂದ ಯೇಸು, ಲೋಕದಲ್ಲಿ ನಿಮಗೆ ಸಂಕಟವುಂಟು, ಭಯಪಡಬೇಡಿರಿ, ನಾನು ಲೋಕವನ್ನು ಜಯಿಸಿದ್ದೇನೆ. ಯೇಸು ಕ್ಷಮಾಪಣೆಯನ್ನು ನೀಡಿರುವದರಿಂದ, ನಾವು ಯಾವುದೇ ಸೋಲನ್ನು ಎದುರಿಸಬಹುದು (ಮತ್ತಾಯ 14:27) ಯೇಸು ತನ್ನ ಪ್ರಸನ್ನತೆಯನ್ನು ನೀಡಿರುವದರಿಂದ, ಯಾವುದೇ ಭಯವನ್ನು ಎದುರಿಸಬಹುದು (ಮಾರ್ಕ 6:50). ಭಯಂಕರವಾದ ಸಂಕಟದ

ಸಮಯದಲ್ಲೂ ಧೈರ್ಯಹೊಂದಬಹುದು, ಯಾಕೆಂದರೆ ಯೇಸು ತನ್ನ ಶಾಂತಿಯನ್ನು ನೀಡಿದ್ದಾನೆ (ಯೋಹಾನ 16:33).

ಯೇಸು "ಲೋಕವನ್ನು ಜಯಿಸಿದ್ದಾನೆ" ಎಂಬುದು ಸುವಾರ್ತೆಯ ಸುದ್ಧಿಯಾಗಿದೆ. ಆತನು ಲೋಕದ ಅಪರಾಧ, ಶೋಧನೆ ಹಾಗೂ ಹಿಂಸೆಯನ್ನು ಜಯಿಸಿದ್ದಾನೆ. ನಾವು ಕೂಡ ಯೋಹಾನನೊಂದಿಗೆ, "ಯಾಕಂದರೆ ದೇವರಿಂದ ಹುಟ್ಟಿರುವಂಥದೆಲ್ಲವು ಲೋಕವನ್ನು ಜಯಿಸುತ್ತದೆ, ಲೋಕವನ್ನು ಜಯಿಸುವಂಥದ್ದು ನಮ್ಮ ನಂಬಿಕೆಯೇ ಎನ್ನಬಹುದು" (1 ಯೋಹಾನ 5:4). ಯೇಸುವಿನ ಜಯದಲ್ಲಿ ಆಳವಾದ ಅರ್ಥವಿದೆ, ಏಕೆಂದರೆ ಲೋಕವು ನೀಡುವ ಸಕಲ ಸಂಕಟಗಳನ್ನು ಅದು ಜಯಿಸುತ್ತದೆ. ಅದರ ಭಲದಿಂದ ನಾವು ನಮ್ಮ ಪ್ರಯಾಣವನ್ನು ಪೂರ್ಣ ಮಾಡಬಹುದು. ನಂಬುವವರು ಅದರಲ್ಲಿ ಮುಂದುವರೆಯಬಹುದು.

## ಮುಕ್ತಾಯ

ಅಪೊಸ್ತಲರ ಹಾಗೆ ನಾವುಗಳು ಸಹ ಸಮಾಧಾನವನ್ನು ಹರಸಬೇಕು. ಆತನ ಸತ್ಯದಿಂದ ದೊರೆಯುವ ಸಮಾಧಾನ, ಆತನ ಸನ್ನಿಧಿಯಲ್ಲಿ ನೆಲೆಗೊಳ್ಳುವದರಿಂದ ದೊರೆಯುವ ಸಮಾಧಾನ, ಲೋಕದ ಸಂಕಟಗಳನ್ನು ಅದು ಜಯಿಸುತ್ತದೆ. ಆ ಸಮಾಧಾನವನ್ನು ಹೊಂದಿಕೊಂಡು ಹೇಗೆ ಅದರಲ್ಲಿ ನೆಲೆಗೊಳ್ಳಬಹುದು? ಸಮಾಧಾನದ ಮಾರ್ಗವನ್ನು ರೋಮಾಪುರ 6:3ರಲ್ಲಿ ತಿಳಿಸಲಾಗಿದೆ. ಸುವಾರ್ತೆಗೆ ವಿಧೇಯರಾಗುವದರಿಂದ ನಾವು ಆತನನ್ನು ಸೇರಿಕೊಳ್ಳುತ್ತೇವೆ (ರೋಮಾಪುರ 6:17). ಬೆಳಕಿನಲ್ಲಿ ನಂಬಿಕೆಯಿಂದ ನಡೆಯುವದರಿಂದ, ಆತನಲ್ಲಿ ನೆಲೆಗೊಳ್ಳುತ್ತೇವೆ (1 ಯೋಹಾನ 1:7). ನಂತರ ನಮ್ಮ ಸಕಲ ಕಷ್ಟಗಳನ್ನು ಆತನ ಪಾದಗಳಿಗೆ ಹಾಕುತ್ತೇವೆ (ಫಿಲಿಪ್ಪಿ 4:6, 7). ಆತನು ನಮ್ಮ ಮನವಿಯನ್ನು ಆಲಿಸಿ, ಸಮಾಧಾನದ ದೇವ ದೂತರನ್ನು ಕಳುಹಿಸುತ್ತಾನೆ; ನಮ್ಮ ಜೀವಿತದಲ್ಲಿ ಉಂಟಾಗುವ ಸಂಕಟದ ಸಮಯದಲ್ಲಿ ಅದು ನಮಗೆ ದೊರೆಯುತ್ತದೆ. ನಾವು ಸಮಾಧಾನದ ಪ್ರಭವಿನಲ್ಲಿ ನೆಲೆಗೊಂಡಿದ್ದರೆ ಆತನು ತನ್ನ ರಕ್ತದ ಮೂಲಕ ಸಂಪಾದಿಸಿದ ಸಮಾಧಾನವನ್ನು ನಾವುಗಳು ಹೊಂದುತ್ತೇವೆ. ಆತನ ಜೀವ ಮತ್ತು ಜಯದಲ್ಲಿ ನಾವುಗಳು ಇರುವಾಗ ಪ್ರಾಯೋಗಿಕವಾದ ಆತನ ಸಮಾಧಾನವು ದೊರೆಯುತ್ತದೆ.

---

*"ಕ್ರಿಸ್ತ ಯೇಸುವಿನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನಮಾಡಿಸಿಕೊಂಡವರಾದ ನಾವೆಲ್ಲರು ಆತನ ಮರಣದಲ್ಲಿ ಪಾಲುಗಾರರಾಗುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡೆವೆಂದು ನಿಮಗೆ ತಿಳಿಯದೋ?" (ರೋಮಾಪುರ 6:3).*

*"ಯಾವ ಸಂಬಂಧವಾಗಿಯೂ ಚಿಂತೆಮಾಡದೆ ಸರ್ವವಿಷಯದಲ್ಲಿ ದೇವರ ಮುಂದೆ ಕೃತಜ್ಞತಾಸ್ತುತಿಯನ್ನೂ ಪ್ರಾರ್ಥನೆವಿಜ್ಞಾಪನೆಗಳನ್ನೂ ಮಾಡುತ್ತಾ ನಿಮಗೆ ಬೇಕಾದದ್ದನ್ನು ತಿಳಿಯಪಡಿಸಿರಿ. ಆಗ ಎಲ್ಲಾ ಗ್ರಹಿಕೆಯನ್ನು ಮೀರುವ ದೇವ ಶಾಂತಿಯು ನಿಮ್ಮ ಹೃದಯಗಳನ್ನೂ ಯೋಚನೆಗಳನ್ನೂ ಕ್ರಿಸ್ತ ಯೇಸುವಿನಲ್ಲಿ ಕಾಯುವದು" (ಫಿಲಿಪ್ಪಿ 4:6, 7).*

*"ಹೀಗಿರಲಾಗಿ ನಾವು ನಂಬಿಕೆಯಿಂದ ನೀತಿವಂತರಾದ ಕಾರಣ ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ದೇವರೊಂದಿಗೆ ಉಂಟಾದ ಸಮಾಧಾನದಲ್ಲಿ ಇರೋಣ" (ರೋಮಾಪುರ 5:1).*